**ಎರಡನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ದೊಡ್ಡಬಳ್ಳಾಪುರ**

**ಓ.ಎಸ್. 146/2021**

**ಪಿ.ಡಬ್ಲ್ಯೂ -2**

| | |
|---|---|
| **ಹೆಸರು** | ಶಿವಪ್ಪ |
| **ತಂದೆಯ ಹೆಸರು** | ಲೇಟ್ ಸಣ್ಣ ಪಿಳ್ಳಪ್ಪ |
| **ವಯಸ್ಸು** | ಸುಮಾರು 70 ವರ್ಷ |
| **ಉದ್ಯೋಗ** | ವ್ಯವಸಾಯ |
| **ವಾಸ ಸ್ಥಳ** | ದೊಡ್ಡಬಳ್ಳಾಪುರ |

**ಸಾಕ್ಷಿಗೆ ದಿನಾಂಕ 17.02.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ವಾದಿ ಪರ ವಕೀಲರಿಂದ**

ನಾನು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ನನ್ನ ಮುಖ್ಯ ವಿಚಾರಣೆಯಲ್ಲಿ ಸಲ್ಲಿಸಿರುತ್ತೇನೆ. ಸದರಿ ಪ್ರಮಾಣ ಪತ್ರದಲ್ಲಿರುವ ಅಂಶಗಳು ನಿಜವಾಗಿದೆ ಮತ್ತು ಸರಿಯಾಗಿದೆ. ಸದರಿ ಪ್ರಮಾಣ ಪತ್ರದಲ್ಲಿರುವ ಸಹಿ ನನ್ನದೇ ಆಗಿರುತ್ತದೆ.

**ಪಾಟೀ ಸವಾಲುಃ  ಪ್ರತಿವಾದಿ ಪರ ವಕೀಲರಿಂದಃ**

ವಾದಿಯು ಸುಮಾರು 60 ವರ್ಷಗಳಿಂದ ಪರಿಚಯ. ವಾದಿಗೆ ಸುಮಾರು 55 ವರ್ಷ ಎಂದರೆ ಸರಿ. ವಾದಿಯು ಸಾಕ್ಷಿ ಹೇಳಲು ವಿನಂತಿಸಿಕೊಂಡಿರುತ್ತಾರೆ, ಅದರಂತೆ ಬಂದು ಸಾಕ್ಷಿ ನುಡಿಯುತ್ತಿದ್ದೇನೆ. ಸಾಕ್ಷ್ಯ ಪ್ರಮಾಣಕ್ಕೆ ನಾನೇ ಮಾಹಿತಿ ಕೊಟ್ಟಿರುತ್ತೇನೆ, ವಾದಿಯು ಯಾವುದೇ ಮಾಹಿತಿಯನ್ನು ಕೊಟ್ಟಿರುವುದಿಲ್ಲ. ನನ್ನ ಸಾಕ್ಷ ಪ್ರಮಾಣಪತ್ರದ 5 ನೇ ಖಂಡಿಕೆಯಲ್ಲಿ ಹೇಳಿದ ಚೆಕ್ಕು ಬಂದಿಗೆ ನಾನೇ ಮಾಹಿತಿ ನೀಡಿರುತ್ತೇನೆ. ವಾದಿ ಜಮೀನಿನ ಚಕ್ಕು ಬಂದಿಯನ್ನು ನೀಡಿರುತ್ತೇನೆ. ದಾವಾಸ್ವತ್ತು ಸರ್ವೇ ನಂ.65 ರ ಪಶ್ಚಿಮಕ್ಕೆಃ ಸೈಟುಗಳು ಮತ್ತು ಕಾಲೋನಿಗಳು ಮಾತ್ರ ಇರುತ್ತವೆ, ಕೃಷಿ ಭೂಮಿ ಇರುವುದಿಲ್ಲ. ಕಾಲೋನಿಯಲ್ಲಿ ಸುಮಾರು 3-4 ಮನೆಗಳು ಇರುತ್ತವೆ. ಮನೆಗಳ ನಂತರ ಕೃಷಿ ಜಮೀನು ಇರುತ್ತದೆ. ಅಲ್ಲಿ ಕೃಷಿ ಮಾಡಲು ಜಾಗವಿರುವುದಿಲ್ಲ, 3-4 ಮನೆಗಳು ನಂತರದಲ್ಲಿ ನಡೆದ ಜಗಳ ಬಗ್ಗೆ ನನಗೆ ತಿಳಿದಿರುತ್ತದೆ. ನಾನು ಪಶ್ಚಿಮದ ಕಡೆಗೆ ವ್ಯವಸಾಯ ಮಾಡುತ್ತಿರಲಿಲ್ಲ ಹಾಗೂ ಅಲ್ಲಿ ಕೃಷಿ ಜಮೀನು ಇರುವುದಿಲ್ಲವೆಂದರೆ ಸರಿ.

ದಿ.21.03.2021 ರಂದು 2 ನೇ ಪ್ರತಿವಾದಿ ಮಾತ್ರ ಬಂದಿರುತ್ತಾರೆ. ಸದರಿ ದಿನದಂದು ಇಟ್ಟಿಗೆ, ಮರಳು ಹಾಗೂ ಇತರೆ ಸಾಮಾಗ್ರಿಗಳು ಎ ಅನುಸೂಚಿ ಸ್ವತ್ತಿನಲ್ಲಿ ಇರುವುದಿಲ್ಲ ಎಂದರೆ ಸರಿ. 2 ನೇ ಪ್ರತಿವಾದಿಯು ಸದರಿ ದಿನದಂದು ಕಂಪೌಂಡ ಕಟ್ಟಲು ಬಂದಿರುವುದಿಲ್ಲ, ನಾನು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ವಾದಿಯು ಅಥವಾ ನಾವಾಗಲಿ ಪ್ರತಿವಾದಿಯರು ತೊಂದರೆ ನೀಡಿರುವ ಕುರಿತು ಯಾವುದೇ ದೂರನ್ನು ದೊಡ್ಡಬೆಳವಂಗಲ ಪೊಲೀಸ್ ಠಾಣೆಯಲ್ಲಿ ನೀಡಿರುವುದಿಲ್ಲವೆಂದರೆ ಸರಿಯಲ್ಲ.

ನಾನೂ ಸಹ ವಾದಿಯ ಊರಿನವನಾಗಿರುವ ಅಲ್ಲಿ ಏನು ನಡೆಯುತ್ತದೆ ಎಂದು ಮಾಹಿತಿ ತಿಳಿದಿರುತ್ತದೆ. ದಾವಾ ಅನುಸೂಚಿ ಬಿ ಸ್ವತ್ತನ್ನು 2 ನೇ ಪ್ರತಿವಾದಿ ಯಾವಾಗ ಖರೀದಿಸಿರುತ್ತಾರೆಂದು ಗೊತ್ತಿರುವುದಿಲ್ಲ. ಖರೀದಿ ಗೆ ಕೊಡುವ ಮೊದಲೆ 1 ನೇ ಪ್ರತಿವಾದಿಯ ಸ್ವತ್ತಿಗೆ ಕಂಪೌಂಡ ನ್ನು ಹಾಕಿ ಕ್ರಯಕ್ಕೆ ಕೊಟ್ಟಿರುತ್ತಾರೆಂದರೆ ಸರಿಯಲ್ಲ.

**OS No. 146/2021**
**PW.2**

ದಿ.21.03.2021 ರಂದು ಬೆಳಗ್ಗೆ 10-00 ರಿಂದ 11-00 ಗಂಟೆಗೆ ಬಂದಿರುತ್ತಾರೆ. ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ, ವಾದಿಯು ಬೆದರಿಕೆ ಹಾಕಿ ಅವರ ಪರವಾಗಿ ಸಾಕ್ಷ ನುಡಿಯಲು ತಿಳಿಸಿದ ಮೇರೆಗೆ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಅದೇ ರೀತಿ ಸದರಿ ದಿನದಂದು ಮಂಜುನಾಥರವರೂ ಸಹ ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ನನ್ನ ಉಕ್ತ ಲೇಖನದ ಮೇಲೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ ಮತ್ತು ಸರಿ ಇದೆ.**

**ಎರಡನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ**
**ದೊಡ್ಡಬಳ್ಳಾಪುರ.**